ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	293
ಸದಸ್ಯರ ಹೆಸರು	ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	22.09.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಅಕ್ರಮ ಮರಳು ಸಾಗಾಣಿಕೆಯಲ್ಲಿ ಇ-ವೇ ಬಿಲ್ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.	ರಾಜ್ಯದಲ್ಲಿ ಉಪಖನಿಜಗಳ ಸಾಗಾಣಿಕೆ ವಾಹನಗಳ ಪರಿಶೀಲನೆ ಸಂದರ್ಭದಲ್ಲಿ ಗಣಿಕಿಕೃತ ಖನಿಜ ಸಾಗಾಣಿಕೆ ಪರವಾನಿಗಳು ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. 2018-19 ಮತ್ತು 2019-20 ನೇ ಸಾಲಿನಲ್ಲಿ ಒಂದು ಪರವಾನಿಗೆಯಡಿ ಒಂದಕ್ಕಿಂತ ಹೆಚ್ಚು ಮರಳು ಸಾಗಾಣಿಕೆ ಮಾಡಿದ 694 ವಾಹನಗಳಿಂದ ರೂ. 88.17 ಲಕ್ಷ ದಂಡ ವಸೂಲಿ ಮಾಡಲಾಗಿರುತ್ತದೆ. 13 ಪ್ರಕರಣಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿರುತ್ತದೆ. ಮುಂದುವರೆದು, ರಾಜ್ಯದಲ್ಲಿ 3 ನಕಲಿ ಪರವಾನಿಗೆಗಳನ್ನು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಮೊಕದಮ್ಮೆಗಳನ್ನು ದಾಖಲಿಸಲಾಗಿರುತ್ತದೆ.
(ಆ)	ಅಕ್ರಮ ಮರಳು ಸಾಗಾಣಿಕೆ ಮಾಡುವವರಿಂದ ಈವರೆವಿಗೂ ಎಷ್ಟು ದಂಡ ವಸೂಲಾಗಿದೆ; ಹಾಗೂ ಇಲ್ಲಿಯವರೆಗೂ ಎಷ್ಟು ಮೊಕದ್ದಮೆಯನ್ನು ದಾಖಲಿಸಿಕೊಳ್ಳಲಾಗಿದೆ:	ಜಿಲ್ಲಾ ಹಾಗೂ ತಾಲೂಕು ಮರಳು ಸಮಿತಿಯ ಸದಸ್ಯ ಇಲಾಖೆಗಳಿಂದ ಅನಧಿಕೃತ ಮರಳು ಸಾಗಾಣಿಕೆ ಮಾಡುವವರ ವಿರುದ್ಧ ನಿಯಮಾನುಸಾರ ಕಟ್ಟು ನಿಟ್ಟಿನ ಕ್ರಮ ಕೈಗೊಂಡಿದ್ದು, 2014-15 ನೇ ಸಾಲಿನಿಂದ 2019-20 ನೇ ಸಾಲಿನ ವರೆಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿಯಲ್ಲಿ ಸಂಗ್ರಹಿಸಲಾದ ದಂಡ ಮೊತ್ತ ಹಾಗೂ ಸಂಬಂಧ ಪಟ್ಟ ನ್ಯಾಯಲಯ ಹಾಗೂ ಪೋಲಿಸ್ ಠಾಣೆಗಳಲ್ಲಿ ದಾಖಲಿಸಲಾದ ಮೊಕದ್ಧಮೆ ವಿವರಗಳು **ಅನುಬಂಧ-1** ರಲ್ಲಿ ಲಗತ್ತಿಸಿದೆ.

(೩)	ಮರಳು ಸಾಗಾಣಿಕೆ ಅಕ್ರಮ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು.	ರಾಜ್ಯದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರದಿಂದ ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ. • ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ. • ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ(ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22ರಡಿಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ (ತಿದ್ದುಪಡಿ) ರಿಯಾಯಿತಿ ನಿಯಮಾವಳಿ 1994ರ ನಿಯಮ 31-Rರ ಉಪ ನಿಯಮ 13 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯೋಜಿಸಲಾಗಿರುತ್ತದೆ. • ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಗಳಿಂದ ರಾಜ್ಯದಲ್ಲಿ ಆಯಾಕಟ್ಟಿನ ಪ್ರದೇಶಗಳಲ್ಲಿ ಮರಳು ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ. ಮೇಲ್ಕಂಡಂತೆ, ರಾಜ್ಯದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮವಹಿಸಲಾಗಿರುತ್ತದೆ.

ಸಂಖ್ಯೆ: ಸಿಐ 460 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಸಿ.ಸಿ. ಪಾಟೀಲ
ಗಣಿ ಮತ್ತು ಭೂವಿಜ್ಞಾನ ಸಚಿವರು

ಅನಧಿಕೃತ ಮರಳು ಚಟುವಟಿಕೆ ವಿರುದ್ಧ ವಿಧಿಸಿದ ದಂಡ ಮತ್ತು ಮೊಕದ್ದಮೆ ದಾಖಲಿಸಿರುವ ವಿವರ

2014-15

ಕ್ರ. ಸಂ.	ಪ್ರಕರಣಗಳ ವಿವರ	ಪ್ರಕರಣಗಳ ಸಂಖ್ಯೆ	ದಂಡ (ರೂ. ಲಕ್ಷಗಳಲ್ಲಿ)	ದಾಖಲಿಸಿದ ಎಫ್.ಐ.ಆರ್.
1	ಅನಧಿಕೃತ ಮರಳು ಗಣಿಗಾರಿಕೆ	330	53.10	39
2	ಅನಧಿಕೃತ ಮರಳು ಸಾಗಾಣಿಕೆ	12431	1712.27	1594
3	ಅನಧಿಕೃತ ಮರಳು ದಾಸ್ತಾನು	365	558.04	68
4	ಫಿಲ್ಟರ್ ಮರಳು	239	2.25	171
ಒಟ್ಟು		**13365**	**2325.66**	**1872**

2015-16

ಕ್ರ. ಸಂ.	ಪ್ರಕರಣಗಳ ವಿವರ	ಪ್ರಕರಣಗಳ ಸಂಖ್ಯೆ	ದಂಡ (ರೂ. ಲಕ್ಷಗಳಲ್ಲಿ)	ದಾಖಲಿಸಿದ ಎಫ್.ಐ.ಆರ್.
1	ಅನಧಿಕೃತ ಮರಳು ಗಣಿಗಾರಿಕೆ	619	65.70	233
2	ಅನಧಿಕೃತ ಮರಳು ಸಾಗಾಣಿಕೆ	8409	1161.30	3473
3	ಅನಧಿಕೃತ ಮರಳು ದಾಸ್ತಾನು	163	36.24	49
4	ಫಿಲ್ಟರ್ ಮರಳು	152	2.52	133
ಒಟ್ಟು		**9343**	**1265.76**	**3888**

2016-17

ಕ್ರ. ಸಂ.	ಪ್ರಕರಣಗಳ ವಿವರ	ಪ್ರಕರಣಗಳ ಸಂಖ್ಯೆ	ದಂಡ (ರೂ. ಲಕ್ಷಗಳಲ್ಲಿ)	ದಾಖಲಿಸಿದ ಎಫ್.ಐ.ಆರ್.
1	ಅನಧಿಕೃತ ಮರಳು ಗಣಿಗಾರಿಕೆ	660	47.11	539
2	ಅನಧಿಕೃತ ಮರಳು ಸಾಗಾಣಿಕೆ	7035	688.14	2794
3	ಅನಧಿಕೃತ ಮರಳು ದಾಸ್ತಾನು	152	456.20	109
4	ಫಿಲ್ಟರ್ ಮರಳು	121	22.45	111
ಒಟ್ಟು		**7968**	**1213.90**	**3553**

2017-18

ಕ್ರ. ಸಂ.	ಪ್ರಕರಣಗಳ ವಿವರ	ಪ್ರಕರಣಗಳ ಸಂಖ್ಯೆ	ದಂಡ (ರೂ. ಲಕ್ಷಗಳಲ್ಲಿ)	ದಾಖಲಿಸಿದ ಎಫ್.ಐ.ಆರ್.
1	ಅನಧಿಕೃತ ಮರಳು ಗಣಿಗಾರಿಕೆ	286	191.43	159
2	ಅನಧಿಕೃತ ಮರಳು ಸಾಗಾಣಿಕೆ	3600	666.53	2427
3	ಅನಧಿಕೃತ ಮರಳು ದಾಸ್ತಾನು	85	1211.07	77
4	ಫಿಲ್ಟರ್ ಮರಳು	36	4.33	29
ಒಟ್ಟು		**4007**	**2073.36**	**2692**

2018–19				
ಕ್ರ. ಸಂ.	ಪ್ರಕರಣಗಳ ವಿವರ	ಪ್ರಕರಣಗಳ ಸಂಖ್ಯೆ	ದಂಡ (ರೂ. ಲಕ್ಷಗಳಲ್ಲಿ)	ದಾಖಲಿಸಿದ ಎಫ್.ಐ.ಆರ್.
1	ಅನಧಿಕೃತ ಮರಳು ಗಣಿಗಾರಿಕೆ	191	54.62	106
2	ಅನಧಿಕೃತ ಮರಳು ಸಾಗಾಣಿಕೆ	3361	375.57	2584
3	ಅನಧಿಕೃತ ಮರಳು ದಾಸ್ತಾನು	284	479.29	176
4	ಫಿಲ್ಟರ್ ಮರಳು	33	0.90	27
ಒಟ್ಟು		**3869**	**910.38**	**2893**

2019–20				
ಕ್ರ. ಸಂ.	ಪ್ರಕರಣಗಳ ವಿವರ	ಪ್ರಕರಣಗಳ ಸಂಖ್ಯೆ	ದಂಡ (ರೂ. ಲಕ್ಷಗಳಲ್ಲಿ)	ದಾಖಲಿಸಿದ ಎಫ್.ಐ.ಆರ್.
1	ಅನಧಿಕೃತ ಮರಳು ಗಣಿಗಾರಿಕೆ	240	128.81	106
2	ಅನಧಿಕೃತ ಮರಳು ಸಾಗಾಣಿಕೆ	2676	271.01	1866
3	ಅನಧಿಕೃತ ಮರಳು ದಾಸ್ತಾನು	271	52.75	113
4	ಫಿಲ್ಟರ್ ಮರಳು	6	0.00	5
ಒಟ್ಟು		**3193**	**452.57**	**2090**

CI 460 MMN 2020

236(3)